**ಈಜಿಪ್ಟ್‌ನ ಕೈರೋದಲ್ಲಿನ ಮ್ಯೂಸಿಯಂ ನಮ್ಮ ಹಂಪೆಯಂತೆ ನೋಡಿದಷ್ಟೂ ಮುಗಿಯದ ದೃಶ್ಯಗಳ ಸಂಪುಟ. ಟೂಟಾಂಖ್ ಅಮುನ್ ಎನ್ನುವ ಫೆರೋನ ಗೋರಿಯಲ್ಲಿ ದೊರೆತಿರುವ ಅಮೂಲ್ಯ ವಸ್ತುಗಳ ಸಂಗ್ರಹ ನೋಡುಗರನ್ನು ನಿಬ್ಬೆರಗಾಗಿಸುವಂತಿದೆ ಹಾಗೂ ಈಜಿಪ್ಟ್ ಸಾಮ್ರಾಜ್ಯದ ವೈಭವವನ್ನು ಕಟ್ಟಿಕೊಡುವಂತಿದೆ.**

**■ ಡಿ.ಜಿ. ಮಲ್ಲಿಕಾರ್ಜುನ**



ಯಾವುದೇ ದೇಶಕ್ಕೆ ಹೋದರೂ ಅಲ್ಲಿನ ಮ್ಯೂಸಿಯಂ ನೋಡದೇ ಹಿಂದಿರುಗಿದರೆ ಪ್ರವಾಸ ಅಪೂರ್ಣವೇ. ಈಜಿಪ್ಟ್ ಪ್ರವಾಸದಲ್ಲಿ ಪ್ರಖ್ಯಾತ ಪಿರಮಿಡ್ ಮತ್ತು ನೈಲ್ ನದಿಯಂತೆ ಅಲ್ಲಿನ ಮ್ಯೂಸಿಯಂ ಸಹ ಆಕರ್ಷಣೀಯ. ಈ ಮ್ಯೂಸಿಯಂ ನೋಡಲು ಎರಡರಿಂದ ಮೂರು ದಿನಗಳಾದರೂ ಬೇಕು.

ಕೈರೋ ನಗರದಲ್ಲಿರುವ ಈಜಿಪ್ಟಿಯನ್ ಸಂಗ್ರಹಾಲಯವನ್ನು 'ರಾಷ್ಟ್ರೀಯ ಸಂಪತ್ತು' ಎನ್ನಲಾಗುತ್ತದೆ. ಒಂದು ಶತಮಾನಕ್ಕೂ ಹಳೆಯದಾದ ಈ ಮ್ಯೂಸಿಯಂ ಕಟ್ಟಡವೇ ಒಂದು ಪ್ರಾಚೀನ ಕಲಾಕೃತಿ. ವಿಶ್ವದ ಅನೇಕ ವಸ್ತುಸಂಗ್ರಹಾಲಯಗಳಲ್ಲಿ ಈಜಿಪ್ಟ್‌ನ ಪ್ರಾಚೀನ ಕಲಾಕೃತಿಗಳು ಇದ್ದರೂ ಕೈರೋ ಮ್ಯೂಸಿಯಂನಲ್ಲಿರುವಷ್ಟು ಅಮೂಲ್ಯ ಸಂಗ್ರಹ ಬೇರೆಲ್ಲೂ ಇಲ್ಲ. ಸೂಕ್ಷ್ಮ ಕೆತ್ತನೆಯ ಆಭರಣದಿಂದ ಹಿಡಿದು ಬೃಹತ್ ಮೂರ್ತಿಗಳವರೆಗೆ 1ಲಕ್ಷ 20 ಸಾವಿರಕ್ಕೂ ಅಧಿಕ ಅಪೂರ್ವ ವಸ್ತುಗಳ ಸಂಗ್ರಹ ಇಲ್ಲಿದೆ.

### ರೊಸೆಟ್ಟ ಶಿಲೆ

ಕೈರೋ ಮ್ಯೂಸಿಯಂ ಪ್ರವೇಶಿಸುತ್ತಿದ್ದಂತೆಯೇ ಒಂದು ಶಿಲಾ ಶಾಸನದ ಬೃಹತ್ ಭಾವಚಿತ್ರ ಕಾಣುತ್ತದೆ. ಅದುವೇ ರೊಸೆಟ್ಟಾ ಶಿಲೆ. ಈಜಿಪ್ಟ್ ಲಿಪಿಯ ಶೋಧನೆ ಆಗಿದ್ದು ಈ ಶಾಸನದಿಂದಲೇ.

ಶಾಂಪೊಲಿಯಾನ್ ಎಂಬ ವಿದ್ವಾಂಸ ಅತ್ಯಂತ ಶ್ರದ್ಧೆಯಿಂದ ಈಜಿಪ್ಟಿಯನ್ನರ ಚಿತ್ರಲಿಪಿಗಳನ್ನು ಅರ್ಥಮಾಡಿಕೊಳ್ಳಲು ಶ್ರಮಿಸಿದರು. ಈಜಿಪ್ಟಿಯನ್ ಲಿಪಿಯ 'ಪವಿತ್ರ ಕೆತ್ತನೆ'ಗಳಿರುವ ಒಂದು ನಿಲುವುಗಂಬದ ಬರಹವು ಟಾಲೆಮಿ ಮತ್ತು ಕ್ಲಿಯೋಪಾತ್ರಗೆ ಸಂಬಂಧಿಸಿದೆಯೆಂದು ಅದರಲ್ಲಿ ಕಡೆಯಲ್ಲಿದ್ದ ಗ್ರೀಕ್ ಅಕ್ಷರಗಳಿಂದ ಅವರು ಕಂಡುಕೊಂಡರು. ರಾಜರ ಹೆಸರು, ಬಿರುದುಗಳಿರುವ ಬಳೆಯಾಕಾರದೊಡನೆ ಮತ್ತೆ ಮತ್ತೆ ಕಾಣಿಸಿದ ಎರಡು ಚಿತ್ರಲಿಪಿ ಬರಹಗಳು ಪ್ರಭುಗಳ ಹೆಸರುಗಳಿರಬೇಕೆಂದು ಊಹಿಸಿ ಅವರು 1822ರಲ್ಲಿ ಹನ್ನೊಂದು ಈಜಿಪ್ಟಿಯನ್ ಅಕ್ಷರಗಳನ್ನು ತಾತ್ಕಾಲಿಕವಾಗಿ ಗುರುತಿಸಿದರು. ವರ್ಣಮಾಲೆಯೊಂದನ್ನು ಈಜಿಪ್ಟ್ ಹೊಂದಿತ್ತೆಂಬುದಕ್ಕೆ ಪುರಾವೆ ಒದಗಿಸಿದರು. ಆನಂತರ ಅವರು ನೈಲ್ ನದೀತಟದಲ್ಲಿ ರೊಸೆಟ್ಟ ಪಟ್ಟಣದ ಬಳಿ ನೆಪೋಲಿಯನ್ನರ ಸೈನಿಕರಿಗೆ ಸಿಕ್ಕಿದ್ದ ಶಿಲಾಫಲಕವೊಂದಕ್ಕೆ ಈ ಅಕ್ಷರಗಳನ್ನು ಜೋಡಿಸಿದರು.

ಈಗ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿರುವ ಈ ರೊಸೆಟ್ಟಾ ಶಿಲೆಯು ಮೂರು ಭಾಷೆಗಳ ಲಿಪಿಗಳನ್ನೊಳಗೊಂಡಿದೆ. ಮೊದಲು ಚಿತ್ರಲಿಪಿಯಲ್ಲಿ, ಎರಡನೆಯದಾಗಿ ಈಜಿಪ್ಟಿಯನ್ನರ ಸಾಮಾನ್ಯ ಬಳಕೆಯ ಡೆಮೊಟಿಕ್ ಲಿಪಿಯಲ್ಲಿ ಮತ್ತು ಮೂರನೆಯದ್ದು ಗ್ರೀಕ್ ಲಿಪಿ. ತನ್ನ ಗ್ರೀಕ್ ಭಾಷಾಜ್ಞಾನದಿಂದ ಮತ್ತು ನಿಲುಗಂಬದಿಂದ ಗುರುತಿಸಿಕೊಂಡಿದ್ದ ಹನ್ನೊಂದು ಅಕ್ಷರಗಳಿಂದ ಶಾಂಪೊಲಿಯಾನ್ ಇಪ್ಪತ್ತು ವರ್ಷಕಾಲ ಶ್ರಮಿಸಿ ಇಡೀ ಶಿಲಾಲೇಖನವನ್ನು ಅರ್ಥಮಾಡಿಕೊಂಡು, ಈಜಿಪ್ಟ್‌ನ ವರ್ಣಮಾಲೆಯನ್ನು ಸಂಪೂರ್ಣವಾಗಿ ಶೋಧಿಸಿ ಕಳೆದುಹೋಗಿದ್ದ ಒಂದು ಜಗತ್ತನ್ನು ಮತ್ತೆ ಪಡೆದುಕೊಳ್ಳಲು ದಾರಿಯನ್ನು ತೆರೆದಿಟ್ಟರು. ಅದೊಂದು ಚರಿತ್ರೆಯ ಇತಿಹಾಸದಲ್ಲಿ ನಡೆದ ಶಿಖರಪ್ರಾಯ ಸಾಧನೆ.

ಈಜಿಪ್ಟಿಯನ್ ವಸ್ತುಸಂಗ್ರಹಾಲಯದ ನೆಲಮಹಡಿಯೂ ಸೇರಿದಂತೆ 4 ಅಂತಸ್ತುಗಳಿವೆ. ಒಂದೊಂದು ಅಂತಸ್ತಿನಲ್ಲೂ ಒಳದಾರಿ, ಉಪದಾರಿ, ತಿರುವುಗಳಿವೆ. ಕಾಲಾನುಕ್ರಮದಲ್ಲಿ ವಸ್ತುಗಳನ್ನು ಜೋಡಿಸಿಡಲಾಗಿದೆ. ಪುರಾತನ ರಾಜವಂಶ, ಮಧ್ಯಕಾಲೀನ ರಾಜವಂಶ, ಆಧುನಿಕ ರಾಜವಂಶ, ಗ್ರೀಕೋ ರೋಮನ್ ಕಾಲಾವಧಿ ಹೀಗೆ ವಿಂಗಡಿಸಲಾಗಿದೆ. ಮೇಲ್ಮಹಡಿಯಲ್ಲಿ ವಿಷಯಾನುಕ್ರಮದಲ್ಲಿ ವಸ್ತುಗಳನ್ನು ಜೋಡಿಸಲಾಗಿದೆ.

ಪ್ರವೇಶದ್ವಾರದಲ್ಲೇ ಕೈಕಟ್ಟಿ ನಿಂತ ದೇವತೆಗಳ ಬೃಹತ್ ಶಿಲಾವಿಗ್ರಹಗಳಿವೆ. ಕಲ್ಲಿನ ಶವಪೆಟ್ಟಿಗೆಗಳು, ಶವ ಸಂಸ್ಕರಿಸುವ ಆಸನ, ದೇವತೆಗಳ ಪ್ರತಿಮೆಗಳನ್ನು ಕಾಣಬಹುದು. ಶವಸಂಸ್ಕರಣೆಯನ್ನು ಮಾಡುವ ವಿವಿಧ ಅಳತೆಗಳ ಕಲ್ಲಿನ ಟೇಬಲ್‌ಗಳಿವೆ. ಮಧ್ಯದಲ್ಲಿ ದೇಹ ಹಿಡಿಸುವಂತೆ ಸ್ವಲ್ಪ ತಗ್ಗು, ತೊಡೆ ಕೆಳಗೆ ದ್ರವ ಪದಾರ್ಥ ಹರಿದು ಹೋಗಲು ದಾರಿ, ಕೆಳಗೆ ನೆಲದವರೆಗೂ ನೀರು